**ಮೇ: ಪ್ರಧಾನ  ದಿವಾಣಿ ನ್ಯಾಯಾಧೀಶರು ಹಾಗೂ  ಜೆ.ಎಂ.ಎಫ್.ಸಿ ನ್ಯಾಯಾಲಯ, ಮುಧೋಳ**

C.C.No.91/2018
CW-11 /PW-7

| | |
|---|---|
| ಹೆಸರು | ಮಲ್ಲಪ್ಪ ಕೈಪಾಳಿ |
| ತಂದೆ ಹೆಸರು | ಯಲ್ಲಪ್ಪ |
| ವಯಸ್ಸು | 41 ವರ್ಷ |
| ಉದ್ಯೋಗ | ಖಾಸಗಿ ಕೆಲಸ |
| ವಾಸಸ್ಥಳ | ನಾಗರಾಳ ಗ್ರಾಮ. |

**ದಿನಾಂಕ: 06-02-2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ:- ಎ.ಪಿ.ಪಿ ರವರಿಂದ.**

ಮೃತ ಸಿದ್ದಪ್ಪ ನನ್ನ ಸಂಬಂದಿಕ. ಅವರು ಈಗ ಸುಮಾರು 7-8 ವರ್ಷಗಳ ಹಿಂದೆ ಆದ ರಸ್ತೆ ಅಪಘಾತದಲ್ಲಿ ಆದ ಗಾಯದಿಂದ ಮೃತರಾಗಿರುತ್ತಾರೆ. ಸದರಿ ಅಪಘಾತ ಹೇಗೆ ಮತ್ತು ಯಾರ ತಪ್ಪಿನಿಂದಾ ಆಗಿದೆ ಎಂದು ನನಗೆ ಮಾಹಿತಿ ಇರುವುದಿಲ್ಲ. ನಾನು ಪೋಲಿಸರ ಮುಂದೆ ಯಾವದೇ ಹೇಳಿಕೆ ನೀಡಿರುವುದಿಲ್ಲ.

***(ಈ ಹಂತದಲ್ಲಿ ಸಾಕ್ಷಿಯನ್ನು  ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಸ.ಸ.ಅ ರವರು ವಿನಂತಿಸಿದ್ದರಿಂದ ಸದರಿ ಸಾಕ್ಷಿಯನ್ನು ಪ್ರತಿಕೂಲ  ಸಾಕ್ಷಿ ಎಂದು ಪರಿಗಣಿಸಿ  ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)***

**ಪಾಟಿ ಸವಾಲು- ಎ.ಪಿ.ಪಿ ರವರಿಂದ.**

ದಿ: 10-03-2017 ರಂದು ಮ. 12.00 ಆರೋಪಿ 1 ಇತನು ತಾನು ಚಲಾಯಿಸುತ್ತಿದ್ದ ಮೋ ಸೈಕಲ ಸಂ: ಕೆಎ-48/ವಿ-3976 ನೇದರ ಮೇಲೆ ಚಾಸಾ-6 ರವರನ್ನು ಕೂಡಿಸಿಕೊಂಡು ಯಡಹಳ್ಳಿ ಕಡೆಗೆ ಬರುವಾಗ  ಆರೋಪಿ ನಂ:2 ಇತನು ತಾನು ಚಲಾಯಿಸುತ್ತಿದ್ದ ಮೋ ಸೈಕಲ ಕೆಎ-29/ಕೆ-3522 ನೇದ್ದರ ಹಿಂದೆ ಸಿದ್ದಪ್ಪ ಇವರಿಗೆ ಕೂಡಿಸಿಕೊಂಡು ನಾಗರಾಳದಿಂದ ಮುಧೋಳ ಮಾರ್ಗವಾಗಿ ಕಾತರಕಿ ರೋಡ ಹಿಡಿದು ಗೌಂಡಿ ಕೆಲಸಕ್ಕಾಗಿ ಕಲಾದಗಿ ಕಡೆಗೆ ಹೋಗುತ್ತಿರುವಾಗ ಸದರಿ ಮೋಟಾರ ಸೈಕಲನ ಚಾಲಕರು ಅವುಗಳನ್ನು ಅತೀ ವೇಗವಾಗಿ ಮತ್ತು ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ಒಬ್ಬರಿಗೊಬ್ಬರು ಎದಿರು ಬದಿರುನಿಂದ ಡಿಕ್ಕಿ ಮಾಡಿ ಅಪಘಾತಪಡಿಸಿದರು ಮತ್ತು ಸದರಿ ಅಪಘಾತದಲ್ಲಿ 1 ನೇ ಮತ್ತು 2 ನೇ ಆರೋಪಿತರು ಮತ್ತು ಚಾಸಾ-6 ಹಾಗೂ ಸಿದ್ದಪ್ಪ  ರವರಿಗೆ ಗಾಯಗಳಾದವು ಎಂದರೆ ಸರಿಯಲ್ಲ. ನಂತರ ನಮ್ಮ ಸಂಬಂದಿಕ ಸಿದ್ದಪ್ಪ ಇತನಿಗೆ ಮುಧೋಳ ಡಾ: ಬಸರಡ್ಡಿ ಆಸ್ಪತ್ರೆಯಲ್ಲಿ ಪ್ರಥಮ ಉಪಚಾರ ಕೋಡಿಸಿ ಅವರನ್ನು ಹೆಚ್ಚಿನ ಉಪಚಾರಕ್ಕಾಗಿ ಹುಬ್ಬಳಿಯ ಕಿಮ್ಸ ಆಸ್ಪತ್ರೆಗೆ ದಾಖಲಿಸಿದಾಗ ಅವರು ದಿ: 11-03-2017 ರಂದು ತೀರಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.  ಸದರಿ ಅಪಘಾತ ಈಗ ನ್ಯಾಯಾಲಯದ ಮುಂದಿರುವ ಇಬ್ಬರು ಆರೋಪಿತರ ತಪ್ಪಿನಿಂದಾ ಆಗಿರುತ್ತದೆ ಎಂದರೆ ಸರಿಯಲ್ಲ.

ಈಗ ಪ್ರಕರಣದ ವಿಚಾರಣೆ ಕಾಲಕ್ಕೆ ದಿಃ 11-03-2017 ರಂದು ಈಗ ನನಗೆ ಓದಿ ಹೇಳಿದ ಹಾಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಹೇಳಿಕೆಯನ್ನು ಈಗ ನಿಪಿ-15 ಎಂದು ಗುರುತಿಸಲಾಯಿತು. ನಿಪಿ-15 ರಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದ್ದರೂ ಸಹಿತ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ-** ಆರೋಪಿತರ ಪರ ವಕೀಲರು ಏನೂ ಇಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

SD/-
ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆಎಂಎಫ್‌ಸಿ ಮುಧೋಳ.

ಸಾಕ್ಷಿಯ ಸಹಿ